ಶ್ರೀ ಆರ್.ವಿ. ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ.

ಆ) ಸದರಿ ಪಾಲಿಟೆಕ್ನಿಕ್‌ಗೆ ರೂ. 800.00 ಲಕ್ಷಗಳ ಅಂದಾಜಿನಲ್ಲಿ ಕಟ್ಟಡವನ್ನು ಮೆ: ರೈಟ್ಸ್ ಸಂಸ್ಥೆಯವರಿಂದ ನಿರ್ಮಿಸಲಾಗಿದ್ದು, ಮುಖ್ಯ ಕಟ್ಟಡ, ವರ್ಕ‌ಷಾಪ್ ಕಟ್ಟಡ ನಿರ್ಮಿಸಿದ್ದು, ಮುಖ್ಯ ಕಟ್ಟಡದಲ್ಲಿ 01 ಪ್ರಿನ್ಸಿಪಾಲರ ಕೊಠಡಿ, 01 ಆಡಳಿತ ಕಛೇರಿ ಕೊಠಡಿ, 04 ವಿಭಾಗಾಧಿಕಾರಿಗಳ ಕೊಠಡಿ, 01 ಎಜುಸ್ಯಾಟ ಕೊಠಡಿ, 01 ಮಿನಿ ಆಡಿಟೋರಿಯಂ ಕೊಠಡಿ, 14 ತರಗತಿ ಕೊಠಡಿ, ಸಿವಿಲ್ ಲ್ಯಾಬ್‌ಗೆ 04 ಕೊಠಡಿಗಳು, ಕಂಪ್ಯೂಟರ್ ಸೈನ್ಸ್ ಲ್ಯಾಬ್‌ಗೆ 03 ಕೊಠಡಿಗಳು, ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಲ್ಯಾಬ್‌ಗೆ 04 ಕೊಠಡಿಗಳು ಮತ್ತು ಮೆಕ್ಯಾನಿಕಲ್‌ಗೆ 2 ವರ್ಕ‌ಷಾಪ್ ಕಟ್ಟಡಗಳು ಮತ್ತು 04 ಲ್ಯಾಬ್ ಕೊಠಡಿಗಳು ಇರುತ್ತವೆ. ನೆಲ ಅಂತಸ್ತು ಮತ್ತು ಮೊದಲನೇ ಮಹಡಿಯಲ್ಲಿ ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕವಾಗಿ ಎರಡೆರಡು ಶೌಚಾಲಯಗಳು ಇರುತ್ತವೆ. ಪ್ರಸ್ತುತ ಸೈಕಲ್ ಸ್ಟ್ಯಾಂಡ್ ನಿರ್ಮಿಸುತ್ತಿಲ್ಲ.

ಇ) ಉದ್ಭವಿಸುವುದಿಲ್ಲ.

ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಹುದ್ದೆಗಳ ಭರ್ತಿ

1467(2080); ಶ್ರೀ ಕುಮಾರಸ್ವಾಮಿ ಎಚ್.ಕೆ. (ಸಕಲೇಶಪುರ)

ಅ) ರಾಜ್ಯದ ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು);

ಇ) ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಕಿರಿಯ ಕಾಲೇಜುಗಳಲ್ಲಿ ಶೇ. 50ಕ್ಕೂ ಹೆಚ್ಚು ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಉ) ಈ ಹುದ್ದೆಗಳಿಗಾಗಿ ನಿವೃತ್ತ ಉಪನ್ಯಾಸಕರುಗಳು ನೇಮಕಾತಿಗಾಗಿ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಹೌದು

ಆ) ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ವಿವಿಧ ವಿಷಯಗಳ ಒಟ್ಟು 1130 ಉಪನ್ಯಾಸಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಇ) ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಒಟ್ಟು 07 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿದ್ದು, ಈ ಕಾಲೇಜುಗಳಿಗೆ 60 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿರುತ್ತವೆ. ಈ ಪೈಕಿ 50 ಹುದ್ದೆಗಳು ಭರ್ತಿಯಾಗಿದ್ದು, 10 ಹುದ್ದೆಗಳು ಖಾಲಿ ಇರುತ್ತವೆ.

ಈ) ನೇರ ನೇಮಕಾತಿ ಪ್ರಕ್ರಿಯೆ ಮೂಲಕ ನೇಮಕಗೊಳ್ಳುವ ಉಪನ್ಯಾಸಕರನ್ನು ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು.

ಉ) ಶೈಕ್ಷಣಿಕ ವರ್ಷದ ಮಧ್ಯದಲ್ಲಿ ನಿವೃತ್ತಿಯಾಗುವ ಉಪನ್ಯಾಸಕರನ್ನು ಶೈಕ್ಷಣಿಕ ವರ್ಷದ ಅಂತದವರೆಗೆ ಪುನರ್ ನೇಮಕ ಮಾಡಿಕೊಳ್ಳಲು, ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇದಲ್ಲದೆ, ಕಡಿಮೆ ಕಾರ್ಯಭಾರವಿರುವ ಉಪನ್ಯಾಸಕರನ್ನು ವಾರದಲ್ಲಿ ಮೂರು ದಿನ ನಿಯೋಜಿಸಲು ಕ್ರಮ ಜರುಗಿಸಲಾಗಿದೆ.